# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080-23378375-80, Email:souharda@souharda.coop


ಸಂಖ್ಯೆ : ಕರಾಸೌಸಂಸನಿ/ಆವಿ–31ಪಿ/2019–20 ದಿನಾಂಕ:30.03.2020

**ಕೊರೋನಾ ವೈರಸ್ ಹೋರಾಟಕ್ಕೆ ಉದಾರ ದೇಣಿಗೆ ನೀಡುವ ಕುರಿತು**

**ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಒಂದು ಮನವಿ,**

ಕೊರೋನಾ ವೈರಸ್ (COVID-19) ವಿಶ್ವದ 178ಕ್ಕೂ ಹೆಚ್ಚು ದೇಶಗಳನ್ನು ವ್ಯಾಪಿಸಿದ್ದು, ಭಾರತದಲ್ಲೂ ವೇಗವಾಗಿ ಹರಡುತ್ತಿದೆ. ಭಾರತದಲ್ಲಿ ಈಗಾಗಲೇ ಸೋಂಕಿತರ ಸಂಖ್ಯೆ ಒಂದು ಸಾವಿರವನ್ನು ದಾಟಿ ಮುಂದುವರೆಯುತ್ತಿದ್ದರೆ ಕರ್ನಾಟಕ ರಾಜ್ಯದಲ್ಲೂ ಸೋಂಕಿತರ ಪ್ರಮಾಣ ಹೆಚ್ಚಾಗುತ್ತಿರುವುದು ಆತಂಕವನ್ನುಂಟು ಮಾಡುತ್ತಿದೆ. ಅಗತ್ಯ ತುರ್ತು ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲ ಸೇವೆಗಳು ಬಂದ್ ಮಾಡಲ್ಪಟ್ಟಿರುವುದರಿಂದ ರಾಜ್ಯದ, ದೇಶದ ಆರ್ಥಿಕತೆಗೆ ಕೂಡ ಹಾನಿಯುಂಟಾಗುತ್ತಿದೆ. ಕೊರೋನಾ ವೈರಸ್ ವಿರುದ್ಧದ ಹೋರಾಟಕ್ಕೆ ದೇಣಿಗೆ ನೀಡುವಂತೆ ದೇಶದ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಮನವಿ ಮಾಡಿರುತ್ತಾರೆ. ಈ ಮನವಿಗೆ ಸ್ಪಂದಿಸಿ ಸಂಘ ಸಂಸ್ಥೆಗಳು, ಕಂಪನಿಗಳು, ಕೈಗಾರಿಕಾ ಪ್ರಮುಕರು, ಕಲಾವಿದರು, ಸೈನಿಕರು ಸೇರಿದಂತೆ ದೇಶದ ಜನತೆ ವೈಯಕ್ತಿಕವಾಗಿ ಕೂಡ ಕೊರೊನಾ ವಿರುದ್ಧದ ಹೋರಾಟಕ್ಕಾಗಿ ದೇಣಿಗೆ ನೀಡುತ್ತಿದ್ದಾರೆ. ಸೌಹಾರ್ದ ಸಹಕಾರಿಗಳು ಕೂಡ ಈ ಸಂದರ್ಭದಲ್ಲಿ ನೆರವು ನೀಡಲು ಮುಂದಾಗುವುದು ಅವಶ್ಯವಾಗಿದೆ.

ಈ ಹಿಂದೆ, ಉತ್ತರ ಕರ್ನಾಟಕ, ಕೊಡಗು, ಜಮ್ಮು ಕಾಶ್ಮೀರ, ಕೇರಳ, ನೇಪಾಳಗಳಲ್ಲಿ ನೆರೆ ಹಾವಳಿಯಾದಾಗ ನೆರೆ ಸಂತ್ರಸ್ತರಿಗೆ ತಾವೆಲ್ಲ ಉದಾರ ದೇಣಿಗೆ ನೀಡಿರುವುದನ್ನು ಸ್ಮರಿಸುತ್ತ ಸಂಯುಕ್ತ ಸಹಕಾರಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅದರಂತೆ ಈ ಬಾರಿಯೂ ಕೂಡ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕೊರೋನಾ ವೈರಸ್ ಪೀಡಿತರ ಚಿಕಿತ್ಸೆಗಾಗಿ ಹಾಗೂ ಮುಂಬರುವ ಇನ್ನಷ್ಟು ಮಹತ್ವದ ಕೊರೋನಾ ವಿರುದ್ಧದ ಹೋರಾಟಕ್ಕಾಗಿ ಎಲ್ಲ ಸೌಹಾರ್ದ ಸಹಕಾರಿಗಳಿಂದ ದೇಣಿಗೆಯನ್ನು ಸಂಗ್ರಹಿಸಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲು ಉದ್ದೇಶಿಸಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಉದಾರವಾಗಿ ದೇಣಿಗೆಯನ್ನು ಕಳುಹಿಸಿ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅಪೇಕ್ಷಿಸುತ್ತದೆ. ಸಶಕ್ತ ಸೌಹಾರ್ದ ಸಹಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆಯನ್ನು ನೀಡಲು ವಿನಂತಿಸಿದೆ.

ದೇಣಿಗೆ ಕಳುಹಿಸುವ ಸೌಹಾರ್ದ ಸಹಕಾರಿಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (KARNATAKA STATE SOUHARDA FEDERALE COOPARETIVE Ltd.,) ಎಂಬ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಚೆಕ್/ಡಿಡಿ ಕಳುಹಿಸಲು ಅಥವಾ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ Current Account No. 0243102000013873, IDBI Bank, Malleshwaram Branch, IFSC Code: IBKL0000243 ಇದಕ್ಕೆ RTGS/NEFT ಮೂಲಕ ಹಣ ಕಳುಹಿಸಲು ಕೋರಿದೆ. RTGS/NEFT ಮೂಲಕ ಹಣ ವರ್ಗಾಯಿಸಿದ್ದಲ್ಲಿ, ಸದರಿ ವಿವರಗಳನ್ನು ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸುವುದು.

**ಬನ್ನಿ, ನಾವುಗಳೆಲ್ಲ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗೋಣ, ಮಾನವೀಯತೆಯನ್ನು ಮೆರೆಯೋಣ.**

ವಂದನೆಗಳೊಂದಿಗೆ,

| | | |
|---|---|---|
| | ಸಹಿ/– | |
| (ಬಿ. ಹೆಚ್. ಕೃಷ್ಣಾರೆಡ್ಡಿ) | (ಜಗದೀಶ ಕವಟಗಿಮಠ) | (ಶರಣಗೌಡ ಜಿ. ಪಾಟೀಲ್) |

Karnataka State Souharda Federal Cooperative Ltd. Reg. No. RSR/SOU/ACT/136/ Regn 051/2001-02 dated 04-01-2002